**ದಿನಾಂಕ 16.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಸಿ.ಎಂ.ಜೆ. ಪ್ರತಿವಾದಿಯ ಪರ ವಕೀಲರಿಂದಃ-**

ನಾನು 9 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಬೆಂಗಳೂರಿನಲ್ಲಿ ಕಳೆದ 22 ವರ್ಷಗಳಿಂದ ವಾಸವಾಗಿದ್ದೇನೆ. ನನ್ನ ತಾಯಿ ನನ್ನ ಜೊತೆ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ನಾನು ಬೆಂಗಳೂರಿನಲ್ಲಿ 5 ರಿಂದ 9 ನೇ ತರಗತಿವರೆಗೆ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದೆ. ಆ ಕುರಿತು ಶಾಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಜನ್ಮ ದಿನಾಂಕದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ಜನ್ಮ ಪ್ರಮಾಣ ಪತ್ರ ಇರುವುದಿಲ್ಲ.

ನಾನು ತಿ. ನರಸೀಪುರ ತಾಲ್ಲೂಕಿನ ರಾಮೇಗೌಡನಪುರ ಗ್ರಾಮದಲ್ಲಿ ವ್ಯಾಸಂಗ ಮಾಡಿಲ್ಲ. ತಿ. ನರಸೀಪುರ ತಾಲ್ಲೂಕಿನ ಟಿ. ಮೇಗಡಹಳ್ಳಿಯಿಂದ ರಾಮೇಗೌಡನಪುರಕ್ಕೆ ಸುಮಾರು 30 ಕಿ.ಮೀ. ಅಂತರವಿದೆ. ನಾನು ಟಿ. ಮೇಗಡಹಳ್ಳಿಯ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಮುಖ್ಯ ಶಿಕ್ಷಕರು ಯಾರಾಗಿದ್ದರು ಎಂದರೆ ನನಗೆ ನೆನಪಿಲ್ಲ.

ನಿಪಿ.22 ರಲ್ಲಿರುವ ನನ್ನ ಭಾವಚಿತ್ರ 2023 ರ ಭಾವಚಿತ್ರವಾಗಿದೆ. ಅದನ್ನು ನಿಪಿ.22 ನ್ನು ಪಡೆಯುವಾಗ ಶಾಲೆಗೆ ನೀಡಿದ್ದೆ ಎಂದರೆ ಸರಿ. ಸದರಿ ಟಿ. ಮೇಗಡಹಳ್ಳಿ ಗ್ರಾಮ ನನ್ನ ತಾಯಿಯ ತಂದೆಯ ಊರಾಗಿದೆ. ಆ ಗ್ರಾಮದಲ್ಲಿ ಗುರುಮಲ್ಲಯ್ಯ

ಮತ್ತು ಗುರುಮಲ್ಲೇಗೌಡ ಎನ್ನುವವರು ಬಹಳಷ್ಟು ಜನರಿದ್ದಾರೆ ಎಂದರೆ ಸರಿಯಲ್ಲ. ಆ ಹೆಸರುಗಳನ್ನು ಸಾಮಾನ್ಯವಾಗಿ ಜಾಸ್ತಿ ಜನರು ಬಳಸುತ್ತಾರೆ ಎಂದರೆ ಸರಿ.

ನನ್ನನ್ನು ಸದರಿ ಟಿ. ಮೇಗಡಹಳ್ಳಿ ಶಾಲೆಗೆ ನನ್ನ ಸೋದರ ಮಾವಂದಿರು ದಾಖಲಿಸಿದ್ದರು. ನನ್ನನ್ನು ಆ ಶಾಲೆಗೆ ಸೇರಿಸುವಾಗ ನನ್ನ ಶಾಲಾ ದಾಖಲಾತಿಗಳಿಗೆ ಅವರು ಸಹಿ ಮಾಡಿದ್ದಾರಾ ಎಂದರೆ ನನಗೆ ನೆನಪಿಲ್ಲ. ಆ ಶಾಲಾ ದಾಖಲಾತಿಗಳಿಗೆ 3 ನೇ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿ. ಹಾಗಾಗಿ, ನಿಪಿ.22 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಸದರಿ ಟಿ. ಮೇಗಡಹಳ್ಳಿ ಶಾಲೆಯಿಂದ ಬೆಂಗಳೂರಿನ ಸರ್ಕಾರಿ ಶಾಲೆಗೆ ವರ್ಗಾವಣೆ ಪತ್ರವನ್ನು ಪಡೆದಿದ್ದೆ. ಬೆಂಗಳೂರಿನ ಸರ್ಕಾರಿ ಶಾಲೆಗೆ ದಾಖಲಾಗಲು ಎಂದು ನಿಪಿ.22 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅದರಲ್ಲಿ ನಾನು ಯಾವ ತರಗತಿಯಿಂದ ಯಾವ ತರಗತಿಯವರೆಗೆ ವ್ಯಾಸಂಗ ಮಾಡಿದ್ದೆ ಎಂದು ನಮೂದಿಸಿಲ್ಲ ಎಂದರೆ ಸರಿ.

ನಿಪಿ.22 ರಲ್ಲಿ ನನ್ನ ತಂದೆ ಗುರುಮಲ್ಲಯ್ಯ ಅಲಿಯಾಸ್ ಗುರುಮಲ್ಲೇಗೌಡ ಎಂದು ನಮೂದು ಇದ್ದು, ಆ ಹೆಸರಿನ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ 3 ನೇ ಪ್ರತಿವಾದಿ ಅಲ್ಲ ಎಂದರೆ ಸರಿಯಲ್ಲ.

ನಿಪಿ.21ರ ದಾಖಲೆಯನ್ನು ಎಲ್ಲಿ ಮತ್ತು ಯಾರು ಸಿದ್ದಪಡಿಸಲಾಯಿತು ಎಂದು ನನಗೆ ಗೊತ್ತಿಲ್ಲ. ಅದನ್ನು ಬರೆದವರು ಯಾರು ಎಂದು ತೋರಿಸಲು ಅವರ ಸಹಿ ಇಲ್ಲ ಎಂದರೆ ಸರಿ. ಹಾಗಾಗಿ, ನಿಪಿ.21ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ.21ಕ್ಕೆ ಪೂರಕವಾಗಿ ವಿವಾಹ ಆಮಂತ್ರಣ ಪತ್ರಿಕೆ ಇರುವುದಿಲ್ಲ. ಹಾಗಾಗಿ, ನಿಪಿ.21 ನನ್ನ ತಾಯಿ ಮತ್ತು 3 ನೇ ಪ್ರತಿವಾದಿಯ ನಡುವಿನ ವಿವಾಹದ ಪತ್ರಿಕೆ ಅಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ತಾಯಿ ಬೆಂಗಳೂರಿನ ಚಾಮರಾಜಪೇಟೆಯ ವಿಟಲ್ ನಗರದಲ್ಲಿ 5 ವರ್ಷಗಳವರೆಗೆ ವಾಸವಾಗಿದ್ದು, ಆನಂತರ ಬೆಂಗಳೂರಿನ ಶ್ರೀನಗರದಲ್ಲಿ ವಾಸವಾಗಿದ್ದು, ಈಗ ಬೆಂಗಳೂರಿನ ಕೆಂಪೇಗೌಡ ನಗರದಲ್ಲಿ ವಾಸವಾಗಿದ್ದೇನೆ. ಆ ಮೂರು ವಿಳಾಸಗಳಿಗೂ ಸಂಬಂಧಿಸಿದಂತೆ ನನ್ನ ತಾಯಿಯ ಹೆಸರಿಗೆ ಪಡಿತರ ಚೀಟಿ ಇರುವುದಿಲ್ಲ.

ನನ್ನ ತಾಯಿ ಸುಮಾರು 28 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ನನ್ನ ತಾಯಿ ರಾಮೇಗೌಡನಪುರದಲ್ಲಿ ವಾಸವಾಗಿದ್ದ ಬಗ್ಗೆ ದಾಖಲೆಯಿರುವುದಿಲ್ಲ.

ನನ್ನ ತಾಯಿ ಮತ್ತು 3 ನೇ ಪ್ರತಿವಾದಿಯ ವೈವಾಹಿಕ ಸಂಬಂಧದಿಂದ ನಾನು ಜನಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ರಾಮೇಗೌಡನಪುರ ಗ್ರಾಮವನ್ನು ಬಿಡಲು ಏನು ಕಾರಣ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಅವರು ಆ ಗ್ರಾಮವನ್ನು ಬಿಟ್ಟು ಬೆಂಗಳೂರಿಗೆ ಹೋದ ನಂತರ ಆ ಗ್ರಾಮಕ್ಕೆ ಬಂದು 3 ನೇ ಪ್ರತಿವಾದಿಯೊಂದಿಗೆ ಸಂಸಾರ ಮಾಡಿಲ್ಲ ಎಂದರೆ ಸರಿ, ನಾವು ಆಗಾಗ ಹೋಗುತ್ತಿದ್ದು, 3 ನೇ ಪ್ರತಿವಾದಿ ನಮ್ಮನ್ನು ಸೇರಿಸುತ್ತಿರಲಿಲ್ಲ. ನನ್ನ ತಾಯಿ 3 ನೇ ಪ್ರತಿವಾದಿಯ ವಿರುದ್ಧ ಇಲ್ಲಿಯವರೆಗೆ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿ.

ನನ್ನ ವಿವಾಹ 2001 ರಲ್ಲಿ ಬೆಂಗಳೂರಿನಲ್ಲಿ ಆಗಿದೆ. ಆ ವಿವಾಹಕ್ಕೆ 3 ನೇ ಪ್ರತಿವಾದಿ ಬಂದಿರಲಿಲ್ಲ. ನಾನು ಮತ್ತು ನನ್ನ ತಾಯಿ ಬೆಂಗಳೂರಿನ ವಿಟಲ್ ನಗರದಲ್ಲಿ ವಾಸವಾಗಿದ್ದಾಗ, 3 ನೇ ಪ್ರತಿವಾದಿ ಅಲ್ಲಿ ವಾಸವಿರಲಿಲ್ಲ ಎಂದರೆ ಸರಿ.

3 ನೇ ಪ್ರತಿವಾದಿಯ ಕುಟುಂಬದ ಆಸ್ತಿಯನ್ನು ಅಕ್ರಮವಾಗಿ ಗಳಿಸಲು ನಾನು ಅವರ ಕುಟುಂಬಕ್ಕೆ ಸೇರಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾಗಮ್ಮ ಎನ್ನುವವರು 3 ನೇ ಪ್ರತಿವಾದಿಯ ಕಾನೂನು ಬದ್ಧ ಹೆಂಡತಿಯೆಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

ಸದರಿ ನಾಗಮ್ಮರವರು 3 ನೇ ಪ್ರತಿವಾದಿಯೊಂದಿಗೆ ರಾಮೇಗೌಡನಪುರ ಗ್ರಾಮದಲ್ಲಿ ಸಂಸಾರ ಮಾಡುತ್ತಿದ್ದಾರೆ ಎಂದರೆ ಸರಿ.

ನಾನು 3 ನೇ ಪ್ರತಿವಾದಿಯ ಮಗಳು ಎಂದು ತೋರಿಸಲು ಪಡಿತರ ಚೀಟಿ ಹಾಜರುಪಡಿಸಿಲ್ಲ. ಸದರಿ ನಾಗಮ್ಮರವರು 1982 ರಲ್ಲಿ 3 ನೇ ಪ್ರತಿವಾದಿಯೊಂದಿಗೆ ವಿವಾಹವಾಗಿ ಅಲ್ಲಿಂದ ಇಲ್ಲಿಯವರೆಗೂ ಸಂಸಾರ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ.

4 ಮತ್ತು 5 ನೇ ಪ್ರತಿವಾದಿಯರು 3 ನೇ ಪ್ರತಿವಾದಿಯ ಮತ್ತು ಸದರಿ ನಾಗಮ್ಮರವರ ಮಕ್ಕಳು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು 3 ನೇ ಪ್ರತಿವಾದಿಯ ಅಕ್ಕಂದಿರು ಎಂದರ ಸರಿ.

ರಾಮೇಗೌಡನಪುರ ಗ್ರಾಮದಲ್ಲಿರುವ 3 ನೇ ಪ್ರತಿವಾದಿಯ ಮನೆಯಲ್ಲಿ ಅವರು, ಸದರಿ ನಾಗಮ್ಮ ಮತ್ತು ಅವರ ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಯರು ವಾಸವಾಗಿದ್ದಾರೆ ಎಂದರೆ ಸರಿ.

ನಂಜುಂಡೇಗೌಡ ಎನ್ನುವವರು 3 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಸದರಿ ನಂಜುಂಡೇಗೌಡರವರು 4 ಮತ್ತು 5 ನೇ ಪ್ರತಿವಾದಿಯರಿಗೆ ನೇರವಾಗಿ 2013 ರಲ್ಲಿ ಮರಣ ಶಾಸನ ಮಾಡಿದ್ದಾರೆ ಎಂದರೆ ಸರಿ. ಆ ಪ್ರಕಾರ 4 ಮತ್ತು 5 ನೇ ಪ್ರತಿವಾದಿಯರು ಖಾತೆಗಳನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. 2013 ರಿಂದ

ಇಲ್ಲಿಯವರೆಗೆ ನಾನು ಮತ್ತು ನನ್ನ ತಾಯಿ ದಾವಾಸ್ತಿಗಳಲ್ಲಿ ನಮಗೆ ಭಾಗವಿದೆ ಎಂದು ಕೋರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಲ್ಲ, ಬಹಳಷ್ಟು ಬಾರಿ 3 ನೇ ಪ್ರತಿವಾದಿಯನ್ನು ಭಾಗ ಕೊಡುವಂತೆ ಕೇಳಿದ್ದೇವು ಮತ್ತು ಗ್ರಾಮಸ್ಥರ ಮೂಲಕ ನ್ಯಾಯ ಪಂಚಾಯಿತಿ ಮಾಡಿಸಿದ್ದೆವು. ಆ ಪಂಚಾಯಿತಿಯನ್ನು ಯಾವಾಗ ಮಾಡಲಾಯಿತು ಎಂದು ನನ್ನ ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

ದಾವಾಸ್ತಿ ಕ್ರಮ ಸಂಖ್ಯೆ 1 ಮತ್ತು 2 ರ ಆಸ್ತಿಗಳು 3 ನೇ ಪ್ರತಿವಾದಿಯ ತಂದೆ ನಂಜುಂಡೇಗೌಡರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ಪಿತ್ರಾರ್ಜಿತ ಆಸ್ತಿಗಳಾಗಿವೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಆ ಆಸ್ತಿಗಳು ಸದರಿ ನಂಜುಂಡೇಗೌಡರವರ ಹೆಸರಿಗೆ ಯಾವ ರೀತಿ ಖಾತೆಯಾಯಿತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

3 ನೇ ಪ್ರತಿವಾದಿಗೆ ಶಿಲ್ಪಾ ಎನ್ನುವ ಮಗಳಿದ್ದು, ಆಕೆಯ ವಿವಾಹ ಮಾಡಲಾಗಿದೆ ಎಂದರೆ ಸರಿ.

ಸದರಿ ನಂಜುಂಡೇಗೌಡರವರು 4 ಮತ್ತು 5 ನೇ ಪ್ರತಿವಾದಿಯರಿಗೆ ಮಾಡಿರುವ ಮರಣಶಾಸನವು ಕಾನೂನುಬಾಹಿರ ಅಲ್ಲ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯ ಮಗಳು ಆಗಿರದ ಕಾರಣ ದಾವಾಸ್ತಿಗಳಲ್ಲಿ ನನಗೆ ವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯನ್ನು ಹೆದರಿಸಿ, ಅವರಿಂದ ಆಸ್ತಿ ಪಡೆಯಲು ಪೊಲೀಸರೊಂದಿಗೆ ಶಾಮೀಲಾಗಿ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ. ನಿಪಿ.13 ಮತ್ತು 14 ನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ.4 ನ್ನು ನಾನು ತಹಶೀಲ್ದಾರ್ ಕಚೇರಿಯಿಂದ ಪಡೆದಿರುತ್ತೇನೆ. ಅದರಲ್ಲಿ ನಮೂದಾಗಿರುವ ಸರ್ವೆ ನಂ.97 ಕ್ಕೂ ಮತ್ತು 3 ನೇ ಪ್ರತಿವಾದಿಗು ಯಾವ ರೀತಿ ಸಂಬಂಧ ಇದೆ ಎಂದು ಕಂದಾಯ ಅಧಿಕಾರಿಗಳಿಂದ ಮಾಹಿತಿ ಪಡೆದಿಲ್ಲ. ಅದರಲ್ಲಿ ನಮೂದಿರುವ ನಂಜೇಗೌಡ ಮತ್ತು ಮಾದಮ್ಮ ರವರ ಹೆಸರಿನ ಖಾತೆಯನ್ನು ಪಡೆದುಕೊಂಡಿಲ್ಲ. ಹಾಗಾಗಿ, ಕಂದಾಯಾಧಿಕಾರಿಗಳೊಂದಿಗೆ ಶಾಮೀಲಾಗಿ ನಿಪಿ.4 ನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ.10 ರಲ್ಲಿ ಸದರಿ ನಂಜುಂಡೇಗೌಡರವರಿಗೆ ಆಸ್ತಿ ಸಂಖ್ಯೆ 95 ಯಾವ ರೀತಿ ಬಂತು ಎಂದು ತೋರಿಸಲು ದಾಖಲೆ ಪಡೆದಿಲ್ಲ.

3 ನೇ ಪ್ರತಿವಾದಿ ನನಗೆ ಯಾವುದೇ ಭಾಗ ಕೊಡುವ ಹೊಣೆಗಾರಿಕೆ ಹೊಂದಿಲ್ಲದಿರುವುದರಿಂದ ನನ್ನ ಪ್ರಕರಣವು ವಜಾಗೊಳ್ಳಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು) **ಹಿರಿಯ ದಿವಾಣಿ ನ್ಯಾಯಾಧೀಶರು,**
ಓ ಹೇ ಕೇ ಸರಿ ಇದೆ **ತಿ.ನರಸೀಪುರ**